# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-10

Cw-10

ಸಾಕ್ಷಿದಾರರ ಹೆಸರುಃ ಶ್ರೀ ಕಿರಣ್ ಕುಮಾರ್ ಕೆ.ಎಂ

ತಂದೇ:ಗಂಡನ ಹೆಸರುಃ ಶ್ರೀ ಮಲ್ಲೇಶಪ್ಪ ಕೆ.ಬಿ

ವಯಸ್ಸುಃ 35 ವರ್ಷ

ಉದ್ಯೋಗಃ ಅಭಿಯಂತರರು, ತಾಲೂಕು ಪಂಚಾಯತಿ, ರಾಣೇಬೆನ್ನೂರು

ವಾಸ ಸ್ಥಳಃ ರಾಣೇಬೆನ್ನೂರು

**ದಿನಾಂಕ:27.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 10 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ರಾಣೇಬೆನ್ನೂರು ತಾಲೂಕು ಪಂಚಾಯತಿ ಕಚೇರಿಯಲ್ಲಿ MGNREGA ಯೋಜನೆಯಡಿಯಲ್ಲಿ ತಾಂತ್ರಿಕ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ವೈ.ಟಿ ಹೊನ್ನತ್ತಿಯ ಪಂಚಾಯತಿ ಕಟ್ಟಡಕ್ಕಾಗಿ MGNREGA ಯೋಜನೆಯಡಿಯಲ್ಲಿ 20 ಲಕ್ಷ ಹಣ ಮತ್ತು PRED ಯೋಜನೆಯಡಿಯಲ್ಲಿ 20 ಲಕ್ಷ ಈ ರೀತಿ ಒಟ್ಟು 40 ಲಕ್ಷ ಹಣ ಮಂಜೂರಾಗಿತ್ತು. ಸದರಿ ವೈ.ಟಿ ಹೊನ್ನತ್ತಿ ಪಂಚಾಯತಿ ಕಟ್ಟಡದ 03 ಗುಂಟೆ ಸರ್ವೇ ನಂ.12/9 ಎಂದು ಇರುತ್ತದೆ. ಸದರಿ ಕಟ್ಟಡ ಕಾಮಗಾರಿ ಕೆಲಸವನ್ನು ಚಾಸಾ-9-ಶ್ರೀ ಲಿಂಗಪ್ಪ ಶಿವಪ್ಪ ರಣಸೂತ ರವರಿಗೆ ವಹಿಸಲಾಗಿತ್ತು.

2. ದಿನಾಂಕಃ20.06.2025 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು, ಚಾಸಾ-9, ಪಂಚಾಯತಿಯ ಸಿಬ್ಬಂದಿ ಮತ್ತು ಸದಸ್ಯರು ಲೈನ್ ಔಟ್ ಹಾಕುವ ಜಾಗಕ್ಕೆ ಹೋಗಿದ್ದೆವು. ನಾವೆಲ್ಲರೂ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ಲೈನ್ ಔಟ್ ಹಾಕಲು

ಹೋದಾಗ ಸುಮಾರು 15-20 ಜನರು ಅಲ್ಲಿಗೆ ಬಂದು ಈ ಜಾಗದ ತಂಟೆಯು ನ್ಯಾಯಾಲಯದ ಮುಂದೆ ಇರುತ್ತದೆ, ಆದ ಕಾರಣ ನೀವು ಈ ಜಾಗದಲ್ಲಿ ಯಾವುದೇ ಕೆಲಸ ಮಾಡಕೂಡದು ಎಂದು ನಿಲ್ಲಿಸಿದರು. ಸದರಿ ಜಾಗದಲ್ಲಿ ಬಹಳಷ್ಟು ಜನ ಬಂದು ತಕರಾರು ಮಾಡಿದ್ದರಿಂದ ಈ ದಿನ ನ್ಯಾಯಾಲಯದ ಮುಂದಿರುವ 1 ರಿಂದ 6 ನೇ ಆರೋಪಿತರು ಸದರಿ ಜಾಗದಲ್ಲಿ ಇದ್ದರೋ ಅಥವಾ ಇಲ್ಲವೋ ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ.

3. ಸದರಿ ಜಾಗವು ಸರ್ಕಾರಿ ಕೆಲಸಕ್ಕೆ ಮಂಜೂರಾದ ಜಾಗ ಆದ ಕಾರಣ ನಾವು ಕಟ್ಟಡದ ಕೆಲಸ ನಿಲ್ಲಿಸಲು ಬರುವುದಿಲ್ಲ ಎಂದು ಸದರಿ ಜನರಿಗೆ ಹೇಳಿ ನಂತರ ಅಲ್ಲಿ ಲೈನ್ ಔಟ್ ಮಾಡಿ ಹೋದೆವು. ಸದರಿ 15-20 ಜನರಿಗೆ ನಾವು ನಿಮ್ಮದೇನಾದರು ತಕರಾರು ಇದ್ದ ಪಕ್ಷದಲ್ಲಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ಎಂದು ತಿಳಿಸಿದೆವು. ಈ ಘಟನೆ ವಿಚಾರವಾಗಿ ಪೊಲೀಸರು ನನ್ನನನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

4. ಪೊಲೀಸರು ನನಗೆ ನೋಟೀಸನ್ನು ಕೊಟ್ಟು ವಿಚಾರಣೆ ಮಾಡಬೇಕಾಗಿದೆ ಬನ್ನಿ ಎಂದು ತಿಳಿಸಿದ್ದರು. ಆದರೆ ಆ ರೀತಿ ನೋಟೀಸು ಕೊಟ್ಟ ದಿನಾಂಕ ನನಗೆ ಈಗ ನೆನಪಿಲ್ಲ. ಪೊಲೀಸರು ನನ್ನನ್ನು ಯಾವ ದಿನಾಂಕ ವಿಚಾರಣೆ ಮಾಡಿದರು ಎಂದು ನನಗೆ ಈಗ ನೆನಪಿಲ್ಲ. ನಾನು ಪೊಲೀಸರ ಮುಂದೆ ಕೊಟ್ಟ ನನ್ನ ಹೇಳಿಕೆಯಲ್ಲಿ ನಾನು ಮತ್ತು ಇತರರು ಬೆಳಿಗ್ಗೆ 11.00 ಗಂಟೆಗೆ ಲೈನ್ ಔಟ್ ಮಾಡುವ ಕೆಲಸಕ್ಕೆ ಹೋಗಿದ್ದೆವು ಎಂದು ಹೇಳಿ ಬರೆಸಿರುತ್ತೇನೆ.

4. ಸದರಿ ಜಾಗಕ್ಕೆ ನಾವು ಹೋಗಿದ್ದೆವು ಮತ್ತು ಅಲ್ಲಿ ಲೈನ್ ಔಟ್ ಮಾಡಿದೆವು ಎಂದು ಸುಳ್ಳ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಟೆಂಡರ್ ನ ಪ್ರತಿಯನ್ನು ನಾನು ನೋಡಿರುತ್ತೇನೆ. ಟೆಂಡರ್ ಪ್ರಕಾರ ಸದರಿ ಕೆಲಸವನ್ನು 03.02.2025 ರಿಂದ 120 ದಿನಗಳೊಳಗೆ ಪೂರ್ಣಗೊಳಿಸಬೇಕಾಗುತ್ತದೆ ಎಂದು ಇರುತ್ತದೆ ಎಂದರೆ ನಿಜ. ನಾವು ಲೈನ್ ಔಟ್ ಮಾಡುವಾಗ 10-15 ಜನ ಬಂದು ತಕರಾರು ಮಾಡಿದರು ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ಚಾಸಾ–1 ಮತ್ತು ಇತರೆ ಸಿಬ್ಬಂದಿಗಳು ಸ್ಥಳಕ್ಕೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ತನಿಖಾಧಿಕಾರಿ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.